**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ–ಕರ್ನಾಟಕ**

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಇಲಾಖೆ, ಕೆ.ಆರ್. ಸರ್ಕಲ್, ನೃಪತುಂಗರಸ್ತೆ, ಬೆಂಗಳೂರು–560001**

**ಸಂಖ್ಯೆ:RMSA/**ಸ.ಪ್ರೌ.ಮು.ಶಿ.ಶೈ.ಪ್ರ/01 **/2011-12** ದಿನಾಂಕ: 13–10–2011

**ಸುತ್ತೋಲೆ**

ವಿಷಯ: ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಿಗೆ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಿಂದ ಕೈಗೊಳ್ಳುವ ಶೈಕ್ಷಣಿಕ ಪ್ರವಾಸದ ಕುರಿತು

****** * ******

**ಪ್ರಸ್ತಾವನೆ:**

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ಗುಣಮಟ್ಟದ ಮಧ್ಯವರ್ತನ ಯೋಜನೆಯಡಿಯಲ್ಲಿ ವಾರ್ಷಿಕ ಕಾರ್ಯಯೋಜನೆ ಮತ್ತು ಆಯವ್ಯಯ 2011–12ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ ಶೈಕ್ಷಣಿಕ ಪ್ರವಾಸ ಹಮ್ಮಿಕೊಳ್ಳಲಾಗಿದೆ. ಇದರಿಂದ ಒಟ್ಟು 4437 ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರು ಪ್ರಯೋಜನ ಪಡೆಯಲಿದ್ದಾರೆ. ಇದು ರಾಜ್ಯದಲ್ಲಿ ಪ್ರಥಮವಾಗಿ ಹಮ್ಮಿಕೊಳ್ಳುತ್ತಿರುವ ಕಾರ್ಯಕ್ರಮವಾಗಿರುತ್ತದೆ.

**ಉದ್ದೇಶಗಳು:**

- ಬೇರೆ ರಾಜ್ಯಗಳ ಭೇಟಿಯ ಅನುಭವದ ಮೇರೆಗೆ ಮುಖ್ಯ ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿ ಪಡಿಸುವ ಪ್ರಮುಖ ಉದ್ದೇಶವಾಗಿರುತ್ತದೆ.
- ವಿವಿಧ ರಾಜ್ಯಗಳ ಭೇಟಿಯ ನಂತರ ನಮ್ಮ ರಾಜ್ಯದ ಶಾಲೆಗಳಲ್ಲಿ ಅವಿಷ್ಕೃತ ಚಟುವಟಿಕೆಗಳನ್ನು ಹಮ್ಮಿಕೊಳ್ಳುವಲ್ಲಿ ಒಂದು ಸಾಧನವಾಗಿರುತ್ತದೆ.
- ವರ್ಗಕೋಣೆಯ ಅಭ್ಯಾಸಗಳನ್ನು ಗಮನಿಸುವುದು, ನಾಯಕತ್ವ ವ್ಯಕ್ತಿತ್ವ ಬೆಳವಣಿಗೆ, ಆಡಳಿತಾತ್ಮಕ ಬೆಳವಣಿಗೆ, ಪಠ್ಯೇತರ ಚಟುವಟಿಕೆಗಳತ್ತ ಒಂದು ನೋಟ.
- ಇತರೆ ರಾಜ್ಯಗಳ ಯಶಸ್ವಿ ಕಾರ್ಯಕ್ರಮಗಳ ಅಳವಡಿಕೆ, ಅನುಷ್ಠಾನ.
- ಆಡಳಿತದಲ್ಲಿರುವ ಅವಶ್ಯಕತೆ ಮತ್ತು ಅಂತರಗಳನ್ನು ಗುರುತಿಸುವುದು, ಸಕಾರಾತ್ಮಕವಾದಲ್ಲಿ ಅಳವಡಿಸಿಕೊಳ್ಳುವುದು.
- 10ನೇತರಗತಿ ಪರೀಕ್ಷಾ ಫಲಿತಾಂಶ ವಿಶ್ಲೇಷಣೆ, ಫಲಿತಾಂಶ ಉತ್ತಮಪಡಿಸಕೊಳ್ಳಲು ಕೈಗೊಳ್ಳಬೇಕಾದ ಕ್ರಮಗಳು.
- ಆಡಳಿತ ಚುರುಕುಗೊಳಿಸುವತ್ತ ಕಾರ್ಯಗತಗೊಳಿಸಬೇಕಾದ ಅಂಶಗಳು

**ಪ್ರವಾಸಕ್ಕೆಗೊಳ್ಳಬೇಕಾದಸ್ಥಳಗಳು:** ಜಿಲ್ಲೆಗಳಿಗೆ ಸಮೀಪವಾದ ನೆರೆರಾಜ್ಯಗಳ ಜಿಲ್ಲೆಗಳೀಗೆ ಭೇಟಿನಿಡಬಹುದಾಗಿರುತ್ತದೆ.

1. ಬೆಂಗಳೂರು ವಿಭಾಗದ ಮುಖ್ಯ ಶಿಕ್ಷಕರು ಭೇಟಿ ನೀಡಬೇಕಾದ ರಾಜ್ಯ–ತಮಿಳುನಾಡು/ಆಂಧ್ರಪ್ರದೇಶ
2. ಮೈಸೂರು ವಿಭಾಗದ ಮುಖ್ಯ ಶಿಕ್ಷಕರು ಭೇಟಿ ನೀಡಬೇಕಾದ ರಾಜ್ಯ–ಕೇರಳ/ ತಮಿಳುನಾಡು
3. ಬೆಳಗಾಂ ವಿಭಾಗದ ಮುಖ್ಯ ಶಿಕ್ಷಕರು ಭೇಟಿ ನೀಡಬೇಕಾದ ರಾಜ್ಯ–ಮಹಾರಾಷ್ಟ್ರ
4. ಗುಲ್ಬರ್ಗಾ ವಿಭಾಗದ ಮುಖ್ಯ ಶಿಕ್ಷಕರು ಭೇಟಿ ನೀಡಬೇಕಾದ ರಾಜ್ಯ–ಆಂಧ್ರಪ್ರದೇಶ

**ಮುಖ್ಯಶೀಕ್ಷಕರು ಪ್ರವಾಸದ ಅವಧೀಯಲ್ಲಿ ಭೇಟಿನೀಡಿದ ಸ್ಥಳಗಳಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶಗಳು:**

- ಮುಖ್ಯ ಶಿಕ್ಷಕರು ಶೈಕ್ಷಣಿಕ ಪ್ರವಾಸ ಕೈಗೊಂಡ ಸಂಧರ್ಭದಲ್ಲಿ ಆಯಾ ರಾಜ್ಯಗಳಿಗೆ ಸಂಬಂಧಪಟ್ಟ ಡಯಟ್‌ಗಳಿಗೆ, ಸಿ.ಟಿಇ ಗಳಿಗೆ ಹಾಗೂ ಸರ್ಕಾರಿ ಪ್ರೌಢಶಾಲೆಗಳಿಗೆ ಭೇಟಿ ನೀಡಬೇಕಾಗಿರುತ್ತದೆ. ಈ ಅವಧೀಯಲ್ಲಿ ಅಲ್ಲಿನ ಶ್ಯಕ್ಷಣಿಕ ಪರಿಸ್ಥಿತಿ,ಆಳವಡಿಸಿಕೊಂಡಿರುವ ಹೊಸ ಅವಿಷ್ಕಾರಗಳು,ಅನುಸರಿಸುತ್ತಿರುವ ಭೋಧನತಂತ್ರಗಳ ಬಗ್ಗೆ ಚರ್ಚೆಮಾಡುವುದು.
- ಮಾಹಿತಿ ಸಂವಹನ ತಂತ್ರಜ್ಞಾನ (ಐ.ಸಿ.ಟಿ)ಕಾರ್ಯಕ್ರಮ, Upload ನಿರ್ವಹಣೆ, ಎಡುಕಾಮ್ ಕಾರ್ಯ ವೈಖರಿ, ಐ.ಸಿ.ಟಿ ಲ್ಯಾಬ್, ಶಿಕ್ಷಕರು ನಿರ್ವಹಿಸುತ್ತಿರುವ ತಂತ್ರಾಂಶ(ಸಾಫ್ಟ್‌ವೇರ್) ಮತ್ತು ಹಾರ್ಡ್‌ವೇರ್, ಗಣಕಯಂತ್ರದ ಬಳಕೆಯಿಂದ ಮಕ್ಕಳ ಕಲಿಕಯ ಮೇಲೆ ಉಂಟಾಗುವ ಪರಿಣಾಮದ ಕುರಿತು ಅವಲೋಕಿಸುವುದು ಹಾಗು ಅವುಗಳ ಬಳಕೆಯ ಬಗ್ಗೆ ಯೋಜನೆ ಸಿದ್ದಪಡಿಸಿಕೋಳ್ಳುವುದು.

- ಕೇಂದ್ರ ಪುರಸ್ಕೃತ  ಯೋಜನೆಯಡಿಯಲ್ಲಿ ಪ್ರಾರಂಭಿಸಿರುವ ಮಾದರಿ ಶಾಲೆ ಮತ್ತು ಹೆಣ್ಣು ಮಕ್ಕಳ ವಿದ್ಯಾರ್ಥಿ ನಿಲಯಕ್ಕೆ ಭೇಟಿ ಹಾಗು ಅಲ್ಲಿನ ಅವಿಷ್ಕøತ ಚಟುವಟಿಕೆಗಳ ಅವಲೋಕನ.
- ವಿಶೇಷ ಶಾಲೆಗಳಿಗೆ ಭೇಟಿ IED ಇಂಟರ್‍ವೆನ್ಷನ್, ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ರಾಜ್ಯಗಳು ಅನುಸರಿಸುತ್ತಿರುವ ತಂತ್ರಗಳ ಮಾಹಿತಿ ಪಡೆಯುವುದು
- ಮಾಹಿತಿ ಸಂವಹನ ತಂತ್ರಜ್ಞಾನ (ಐ.ಸಿ.ಟಿ)ಕಾರ್ಯಕ್ರಮ, ಐ.ಸಿ.ಟಿ ಲ್ಯಾಬ್, ಪಿಠೋಪಕರಣ ವ್ಯವಸ್ಥೆ, ಲ್ಯಾಬೊರೇಟರಿಗಳ ಪರಿಣಾಮಕಾರಿ ಬಳಕೆ ಬಗ್ಗೆ ಅವಲೊಕನ.
- ಮಧ್ಯಾಹ್ನ ಉಪಾಹಾರ, ಆವಿಷ್ಕøತ ಯೋಜನೆಗಳು, ಪ್ರೌಢಶಾಲೆಗೆ ಭೇಟಿ, ಮುಖ್ಯ ಶಿಕ್ಷಕರು ಪಡೆಯುವ ತರಬೇತಿ, ವಿಕೇಂದ್ರಿಕರಣ ಹಾಗೂ ಸಮುದಾಯದ ಪಾತ್ರಗಳ ಬಗ್ಗೆ  ಚರ್ಚೆ ಹಾಗು ಅವಲೋಕನ.
- ಮೇಲೆ ತಿಳಿಸಿದ ಎಲ್ಲಾ ವಿಷಯಗಳನ್ನು ಗಮನಿಸುವುದರೊಂದಿಗೆ ಆಂಧ್ರಪ್ರದೇಶದಲ್ಲಿನ  ವಿಶೇಷ ವಸತಿ ಶಾಲೆಗಳನ್ನು, ಸ್ಮಾರ್ಟ್ ಸ್ಕೂಲ್ಸ್ ಮುಂತಾದ ಪ್ರಯೋಗಗಳಿದ್ದಲ್ಲಿ ಅವುಗಳ ಅವಲೋಕನ ಹಾಗು ಅಧ್ಯಯನ.
- ಕೇರಳರಾಜ್ಯದಲ್ಲಿ ವಿಶೇಷವಾಗಿ ಅಲ್ಲಿಯ ಶಿಕ್ಷಕರೇ ಮಾಹಿತಿ ಸಂವಹನ ತಂತ್ರಜ್ಞಾನ (ಐ.ಸಿ.ಟಿ)ಕಾರ್ಯಕ್ರಮದ ಸಾಫ್ಟ್‍ವೇರ್ ಮೆಂಟೆನನ್ಸ್,ಹಾರ್ಡ್‍ವೇರ್ ಮೆಂಟೆನನ್ಸ್ ನಿರ್ವಹಿಸುತ್ತಿದ್ದು ಈ ಕುರಿತು ಅಭ್ಯಸಿಸಲು ತಿಳಿಸಿದೆ.
- ತಮಿಳುನಾಡಿನ ಶಾಲೆಗಳಲ್ಲಿ Active learning methodology ಯಶಸ್ವಿಯಾಗಿದ್ದು ಈ ಕುರಿತು ಅಧ್ಯಯನ ಮಾಡುವುದು ಹಾಗು ತಮ್ಮ ಶಾಲೆಗಳಲ್ಲಿ  ಆಳವಡಿಸಿಕೊಳ್ಳುವ ಬಗ್ಗೆ ಕ್ರಿಯಾ ಯೋಜನೆಗೆ ಸಿದ್ದಪಡಿಸುವುದು.

**ಘಟಕ ವೆಚ್ಚದ ವಿವರ:**

- ಒಬ್ಬ ಮುಖ್ಯ ಶಿಕ್ಷಕರಿಗೆ ಒಂದು ದಿವಸಕ್ಕೆ ರೂ.500/-ರಂತೆ 03 ದಿವಸದ ಪ್ರವಾಸಕ್ಕೆ ಒಟ್ಟು ರೂ.1500/- ಬಿಡುಗಡೆ ಮಾಡಲಾಗುತ್ತಿದೆ.
- ಒಟ್ಟು ಕರ್ನಾಟಕ ರಾಜ್ಯದ 4437 ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರು ಇದರ ಪ್ರಯೋಜನ ಪಡೆಯಲಿದ್ದಾರೆ.
- ಒಟ್ಟು 4437 ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಿಗೆ ತಲಾ 03 ದಿವಸದ ಪ್ರವಾಸಕ್ಕೆ ರೂ.1500/-ರಂತೆ ಒಟ್ಟು 66.555 ಲಕ್ಷ ಬಿಡುಗಡೆ ಮಾಡಲಾಗುತ್ತಿದೆ.
- ತಲಾ ರೂ.1500/- ನೀಡುತ್ತಿರುವ ಪ್ರವಾಸದ ವೆಚ್ಚ ಕೆ.ಎಸ್.ಆರ್.ಟಿ.ಸಿ ಟ್ರಾನ್ಸ್‍ಪೋರ್ಟೇಷನ್ ವೆಚ್ಚ, ಊಟ ಉಪಾಹಾರ ವೆಚ್ಚ ಹಾಗೂ ವಸತಿ ವೆಚ್ಚ ಒಳಗೊಂಡಿರುತ್ತದೆ.
- ಸಾರಿಗೆ ವ್ಯವಸ್ಥೆಗಾಗಿ ರಾಜ್ಯ ಸರ್ಕಾರಿ ಸ್ವಾಮ್ಯದ ಬಸ್ಸುಗಳನ್ನು ಬಳಸುವುದು.

**ಉಸ್ತುವಾರಿ ಹಾಗೂ ಮೇಲ್ವಿಚಾರಣೆ:-**

- ಆಯಾ ವಿಭಾಗಿಯ ಸಹನಿರ್ದೇಶಕರು ತಮ್ಮ ವ್ಯಾಪ್ತಿಯ ಜಿಲ್ಲೆಗಳ ಮುಖ್ಯಶಿಕ್ಷಕರು ಪ್ರವಾಸಕ್ಕೆ ಎಲ್ಲರು ಒಂದೇ ಜಿಲ್ಲೆಗೆ ಹೋಗದಂತೆ ಬೇರೆ ಬೇರೆ ಜಿಲ್ಲೆಗಳಿಗೆ ಭೇಟಿನೀಡುವಂತೆ ಕಾರ್ಯಕ್ರಮ ರೂಪಿಸುವುದು.
- ಹೊರ ರಾಜ್ಯದ ಜಿಲ್ಲೆಗಳನ್ನು ಆಯ್ಕೆ ಮಾಡಿದ ನಂತರ, ಸಂಭಂದಿಸಿದ ಜಿಲ್ಲಾಉಪನಿರ್ದೇಶಕರುಗಳು ಆಯ್ಕೆ ಮಾಡಿದ ರಾಜ್ಯದ ಜಿಲ್ಲೆಗಳ ಡಿ.ಡಿ.ಪಿಐ/ಡಿ.ಇ ಒ ಮತ್ತುರಾಜ್ಯದ ರಾಜ್ಯ ಕಚೇರಿ ಜೊತೆ ಸಂಪರ್ಕಿಸಿ ಭೇಟಿ ನೀಡಬೇಕಾದ ಸಂಸ್ಥೆ ಹಾಗು ದಿನಾಂಕದ ಕುರಿತು ನಿಗದಿಪಡಿಸಿಕೋಳ್ಳುವುದು.
- ಜಿಲ್ಲಾವಾರು ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಖ್ಯೆಗನುಗುಣವಾಗಿ ಪ್ರವಾಸದ ಅನುದಾನವನ್ನು ಆಯಾ ಜಿಲ್ಲೆಯ ಉಪನಿರ್ದೇಶಕರ ಜಂಟಿಖಾತೆಗೆ ಬಿಡುಗಡೆಮಾಡಲಾಗುತ್ತದೆ.
- ಪ್ರವಾಸದ ಕ್ರಿಯಾ ಯೋಜನೆ ಸಿದ್ಧಪಡಿಸಿ ಆಯಾ ಜಿಲ್ಲೆಯ ಉಪನಿರ್ದೇಶಕರು ಆರ್.ಎಂ.ಎಸ್.ಎ ಕೇಂದ್ರ ಕಛೇರಿಗೆ ದಿನಾಂಕ 15-10-2011ರೊಳಗೆ ಕಳುಹಿಸುವುದು.
- ಪ್ರವಾಸದ ಮೇಲುಸ್ತುವಾರಿಯನ್ನು ನೋಡಿಕೊಳ್ಳಲು ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳಿಗೆ ಸೂಚಿಸಲಾಗಿದೆ.
- ನವೆಂಬರ್ 2011ರೊಳಗಾಗಿ  ಪ್ರವಾಸ ಕಾರ್ಯವನ್ನು ಅಂತಿಮಗೊಳಿಸಲು ಜಿಲ್ಲಾ ಉಪನಿರ್ದೇಶಕರಿಗೆ ತಿಳಿಸಲಾಗಿದೆ.

- ಪ್ರವಾಸದ ವೇಳೆಯಲ್ಲಿ ಮುಖ್ಯಶಿಕ್ಷಕರು, ಹುದ್ದೆಯ ಘಸತೆ ಗೌರವಗಳಿಗೆ ಯಾವುದೇ ಧಕ್ಕೆ ಬಾರದಂತೆ ನಡೆದುಕೊಳ್ಳುವುದು

- ಉಪನಿರ್ದೇಶಕರು ಶೈಕ್ಷಣಿಕ ಪ್ರವಾಸದ ವರದಿಯನ್ನು ಮುಖ್ಯಶಿಕ್ಷಕರಿಂದ ಸಂಗ್ರಹಿಸುವುದು.

- **ವಿಶೇಷ ಸೂಚನೆ** :- ಮುಖ್ಯಶಿಕ್ಷಕರ ಪ್ರವಾಸದ ವರದಿಯನ್ನು ಆಧರಿಸಿ ಜಿಲ್ಲಾಮಟ್ಟದ ವರದಿಯನ್ನು ಫೋಟೊ ಅಲ್ಬಮ್‌ನೊಂದಿಗೆ ಆರ್.ಎಮ್.ಎಸ್.ಎ. ಕೇಂದ್ರ ಕಛೇರಿಗೆ ತಲುಪಿಸುವುದು.

- ವಿವರಗಳಿಗಾಗಿ **ಶ್ರೀಮತಿ ಮಧುಮಾಲತಿ ಪಡುವಣೆ JPO mob- No 9449874382, e-mail ID** rmsakar@gmail.com ಇವರನ್ನು ಸಂಪರ್ಕಿಸುವುದು.

- **ಜಿಲ್ಲಾವಾರು ಶಿಕ್ಷಕರ ಸಂಖ್ಯೆ ಹಾಗೂ ಅನುದಾನ ಈ ಕೆಳಗಿನಂತಿರುತ್ತದೆ:-**

| ಕ್ರ.ಸಂ | ಜಿಲ್ಲೆಗಳು | ಮುಖ್ಯ ಶಿಕ್ಷಕರ ಸಂಖ್ಯೆ | ಅನುದಾನ ಬಿಡುಗಡೆ (ರೂ.ಗಳಲ್ಲಿ) |
|---|---|---|---|
| 1 | ಬಾಗಲಕೋಟೆ | 157 | 235500 |
| 2 | ಬೆಳಗಾಂ | 126 | 189000 |
| 3 | ಬಳ್ಳಾರಿ | 162 | 243000 |
| 4 | ಬೀದರ್ | 156 | 234000 |
| 5 | ಬಿಜಾಪುರ | 113 | 169500 |
| 6 | ಚಾಮರಾಜನಗರ | 82 | 123000 |
| 7 | ಚಿಕ್ಕಬಳ್ಳಾಪುರ | 107 | 160500 |
| 8 | ಚಿಕ್ಕೋಡಿ | 146 | 219000 |
| 9 | ಚಿತ್ರದುರ್ಗ | 108 | 162000 |
| 10 | ದಾವಣಗೆರೆ | 155 | 232500 |
| 11 | ಧಾರವಾಡ | 101 | 151500 |
| 12 | ಗದಗ್ | 81 | 121500 |
| 13 | ಗುಲ್ಬರ್ಗ | 256 | 384000 |
| 14 | ಹಾಸನ | 240 | 360000 |
| 15 | ಕೋಲಾರ | 117 | 175500 |
| 16 | ಕೊಪ್ಪಳ | 143 | 214500 |
| 17 | ಮಧುಗಿರಿ | 94 | 141000 |
| 18 | ಮಂಡ್ಯ | 213 | 319500 |
| 19 | ಮೈಸೂರು | 210 | 315000 |
| 20 | ರಾಯಚೂರು | 181 | 271500 |
| 21 | ರಾಮನಗರ | 105 | 157500 |

| | | | |
|---|---|---|---|
| 22 | ಯಾದಗಿರಿ | 118 | 177000 |
| 23 | ಬೆಂಗಳೂರು ಉತ್ತರ | 55 | 82500 |
| 24 | ಬೆಂಗಳೂರು ದಕ್ಷಿಣ | 80 | 120000 |
| 25 | ಬೆಂಗಳೂರು ಗ್ರಾಮಾಂತರ | 64 | 96000 |
| 26 | ಚಿಕ್ಕಮಗಳೂರು | 115 | 172500 |
| 27 | ಹಾವೇರಿ | 129 | 193500 |
| 28 | ಕೊಡಗು | 48 | 72000 |
| 29 | ಶಿವಮೊಗ್ಗ | 163 | 244500 |
| 30 | ತುಮಕೂರು | 130 | 195000 |
| 31 | ಉಡುಪಿ | 106 | 159000 |
| 32 | ಉತ್ತರ ಕನ್ನಡ | 49 | 73500 |
| 33 | ಸಿರಸಿ | 73 | 109500 |
| 34 | ಮಂಗಳೂರು | 161 | 241500 |
| **ಒಟ್ಟು** | | 4344 | **6516000** |

**Sd/-**

**ರಾಜ್ಯ ಯೋಜನಾ ನಿರ್ದೇಶಕರು**

**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ**

**ಬೆಂಗಳೂರು**

**ಪ್ರತಿಯನ್ನು:**

1 ಎಲ್ಲಾ ವಿಭಾಗೀಯ ಸಹನಿರ್ದೇಶಕರುಗಳಿಗೆ

2 ಜಿಲ್ಲಾ ಉಪನಿರ್ದೇಶಕರುಗಳಿಗೆ

3 ಕಚೇರಿ ಪ್ರತಿ